ಬದಲಾವಣೆ? ಇದರಿಂದ ಏನನ್ನ ಸಾಧಿಸಲು ಹೊರಟಿದ್ದೀಯ? ಹೇಳ್ತೀಯಾ?' ವ್ಯಂಗ್ಯವಾಗಿ ಕೇಳಿದೆ. ಗಂಟೆಗಟ್ಟಲೇ, ದಿನಗಟ್ಟಲೇ ಅವಳ ಕುರಿತು ಚಿಂತಿಸಿ, ಮಾತನಾಡಿಸಲು ಯತ್ನಿಸಿ ಸಾಕಾಗಿ ಹೋಗಿತ್ತು ನನಗೆ. ಅದರ ಜೊತೆಗೆ ಒಳಗೆ ಮೂಡಿದ್ದ ಆತಂಕ ನನ್ನನ್ನು ಅಲುಗಾಡಿಸ ತೊಡಗಿತ್ತು.

ಅವಳು ಮತ್ತೆ ಮೌನದಾಸರೆ ಹೊಕ್ಕಳು.

ನಾನು ಹೇಳಿದೆ 'ಈ ಮೌನ ನಿನ್ನ ಬಗ್ಗೆ ಕಾಳಜಿ ಇರುವ ನನಗೆ ಬಹಳ ದೊಡ್ಡ ಪೆಟ್ಟು ಕೊಡುತ್ತಿದೆ. ನಾನು ಸಹಿಸಬಲ್ಲೆ. ಏಕೆಂದರೆ ನನಗೆ ಶ್ರದ್ಧಾ ಇದ್ದಾಳೆ. ಅಮ್ಮ ಅಪ್ಪ ಇದ್ದಾರೆ. ...ಆದರೆ ನಿನ್ನ ಮೌನ ಮುಂದೊಂದು ದಿನ ಪ್ರಶಾಂತನಿಗೆ, ನಿನ್ನ ಮುದ್ದು ಮಗಳಿಗೆ ಕೊಡುವ ಪೆಟ್ಟು ಭೀಕರವಾಗಿರುತ್ತೆ. ಅದರಿಂದ ಅವರ ಜೀವನ ಏನಾಗುತ್ತೆ ಅಂತ ಗೊತ್ತಿದೆಯಾ ನಿನಗೆ?' ಖಾರವಾದೆ. 'ಮೌನ ಆರೋಗ್ಯಕರವಾಗಿದ್ದರೆ ಔಷಧಿ ಆಗುತ್ತೆ. ಅನಾರೋಗ್ಯಕರವಾಗಿದ್ದರೆ ವಿಷ ಆಗುತ್ತೆ... ಎಲ್ಲರ ಬಾಳಿಗೂ. ಇದನ್ನ ಅರ್ಥ ಮಾಡಿಕೋ... ಯಾರಮೇಲಿನ ಹಟ, ಸೇಡು... ಇದು ಒಳ್ಳೆಯದು ಅಂತ ಅಂದುಕೊಂಡಿದ್ದೀಯಾ?...' ನಂತರ ಹೇಳಿದೆ, 'ನನ್ನ ಕೈಲಾದ ಪ್ರಯತ್ನ ಎಲ್ಲ ಮಾಡ್ತಿದ್ದೀನಿ. ಇನ್ನು ನಿನ್ನ ಜೀವನ ಅಷ್ಟೆ. ಮನುಷ್ಯನಾಗಿ, ಗೆಳೆಯನಾಗಿ, ಹಿತೈಷಿಯಾಗಿ ನಾನು ಏನೇನು ಮಾಡಬಹುದೋ ಎಲ್ಲ ಮಾಡುತ್ತಿದ್ದೀನಿ. ಆದರೆ ಮಾತು ನಿನಗೇ ಸೇರಿರುವಂಥದ್ದು. ಇದು ನನ್ನ ಕೊನೆಯ ಪ್ರಯತ್ನ ಅಷ್ಟೆ. ...ಬೇಕಿದ್ದರೆ ಸಹಕರಿಸು. ಇಲ್ಲವಾದರೆ ಪ್ರಶಾಂತನಿಗೆ ಫೋನ್ ಮಾಡು; ಅವನು ಬಂದು ನಿನ್ನನ್ನ ಕರೆದೊಯ್ಯಲಿ. ನಾನೂ ಊರಿಗೆ ಹೋಗ್ತೀನಿ...' ಒರಟಾಗಿ ಹೇಳಿ ಏಳುವವನಂತೆ ನಟಿಸಿದೆ.

'ಕೂತ್ಕೋ ನಿಶಾಂತ್...' ಅವಳ ಧ್ವನಿ

